

## ಕಥಕ್ ಎಂದರೆ ಕಥೆ ಹೇಳುವುದು

ಕಥಕ್ ನೃತ್ಯ ಭರತನಾಟ್ಯಕ್ಕಿಂತ ಭಿನ್ನ. ಭರತನೃತ್ಯದಲ್ಲಿ ದಕ್ಷಿಣಾದಿ ಸಂಗೀತದ ನಟುವಾಂಗವಿದ್ದರೆ ಕಥಕ್‌ನಲ್ಲಿ 'ಧಾ ಧಿನ್ ಧಿನ್ ಧಾ..' ಎಂಬ ತಬಲಾ ಬೋಲ್‌ಗಳ ಕ್ರಮಬದ್ಧ ಲಯದ ಮೇಲೆ ಅಭಿನಯ, ಭಾವ, ಸೃಜನಶೀಲ ಚಲನೆ ನಡೆಯುತ್ತದೆ. ಕಥಕ್ ಎಂದರೆ ಕಥೆ ಹೇಳುವುದು ಎಂದರ್ಥ. ಸಾಂಪ್ರದಾಯಿಕವಾಗಿ ಕಥಕ್‌ನಲ್ಲಿ ಲಯದ ತೀನ್‌ತಾಲ್‌ದ್ದೇ ಮಹತ್ವದ ಸ್ಥಾನ. ಆದರೆ ಈ ಪ್ರಕಾರದಲ್ಲಿ ತಾಳದ ಬೋಲ್‌ಗಳ ಜೊತೆ ಜೊತೆಗೆ ತಿಹಾಯಿ ರಚನೆಯನ್ನು ಕಾಲಚಕ್ರದ (ಸ್ಪಿನ್) ಮೇಲೆ ಹಿಡಿತ ಸಾಧಿಸುತ್ತಾ ಅಭಿನಯಿಸಬೇಕಾಗುತ್ತದೆ. ಅಲ್ಲದೆ ಕಥಕ್‌ನಲ್ಲಿ ಸಂಗೀತ, ಲಯ, ಭಾವ, ಅಭಿನಯ ಎಲ್ಲವೂ ಏಕಕಾಲಕ್ಕೆ ಅನಾವರಣಗೊಳ್ಳಬೇಕು.

ಬಲವಾಗಿ ಪ್ರತಿಪಾದಿಸುವುದು ರಾಧಾ–ಕೃಷ್ಣರ ಕಥೆಗಳನ್ನು. ಇದಲ್ಲದೆ ರಾಮ–ಸೀತಾ, ಶಿವ–ಪಾರ್ವತಿಯರ ಕಥೆಗಳನ್ನೂ ಕಥಕ್ ನೃತ್ಯದಲ್ಲಿ ಅಭಿನಯಿಸಿದ್ದೇನೆ. ಮುಂದಿನ ಯೋಜನೆಯಾಗಿ ತವಾಯಿಫ್ (ದೇವದಾಸಿಯರು) ಕಥೆಗಳನ್ನೂ ನೃತ್ಯದಲ್ಲಿ ಮಾಡಬೇಕೆಂದಿದ್ದೇನೆ.

◆ **ಕಥಕ್‌ನಲ್ಲಿ ಚಕ್ಕರ್ಸ್ ಬಗ್ಗೆ ಹೇಳಿ. ನೀವು ಸ್ಪಿನ್ ಕಂಟ್ರೋಲ್ ಹೇಗೆ ಮಾಡ್ತೀರಿ?**

ಚಕ್ಕರ್ಸ್ ಕಥಕ್‌ನ ಪ್ರಧಾನ ಆಕರ್ಷಣೆ. ಇದನ್ನು ಮಾಡುವಾಗ ಒಂದು ಫೋಕಸ್ ಪಾಯಿಂಟ್ ಅಂತ ಇರಬೇಕು. ಹಿಮ್ಮಡಿಗಳ ಆಧಾರದಿಂದಲೇ ಬುಗುರಿ ತಿರುಗಿದಂತೆ ಬ್ಯಾಲೆನ್ಸ್ ಮಾಡುತ್ತಾ ಅಭಿನಯಿಸಬೇಕು. ಇಲ್ಲಿ ಸಾಕಷ್ಟು ಪರಿಶ್ರಮ, ಉಸಿರು ನಿಯಂತ್ರಣ ಸಾಮರ್ಥ್ಯ ಎಲ್ಲವೂ ಮುಖ್ಯವಾಗುತ್ತದೆ. ಇದೊಂದು ರೀತಿಯಲ್ಲಿ ಸವಾಲೇ ಆಗಿದೆ.

◆ **ಕೊರೊನಾ ಕಷ್ಟಕಾಲದಲ್ಲಿ ನಿಮ್ಮ ಸಾಂಸ್ಕೃತಿಕ ಚಟುವಟಿಕೆ ಹೇಗೆ ನಡೆಯುತ್ತಿದೆ?**

ಕೊರೊನಾ ಸಂಕಷ್ಟ ಕಲಾವಿದರೂ ಸೇರಿದಂತೆ ಎಲ್ಲ ವರ್ಗಕ್ಕೂ ಬಹಳ ತೊಂದರೆ ನೀಡಿತು. ಆದರೆ ಈ ಸಂಕಷ್ಟದ ಕಾಲ ಒಂದು ರೀತಿಯಲ್ಲಿ ನನಗೆ ಬಹಳ ಸಹಾಯ ಮಾಡಿತು ಎಂದೇ ಹೇಳಬಹುದು. ಕಥಕ್ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಸಾಕಷ್ಟು ಸಮಯ ಸಿಕ್ಕಿದೆ. ಹಲವು ಪುಸ್ತಕಗಳನ್ನು ಓದಿದೆ. ಕಥಕ್ ಕಲಿಯುವ ಮಕ್ಕಳಿಗೆ ಕಲಿಸಲೆಂದೇ ಸರಿಯಾದ ಸಿಲೆಬಸ್ ಸಿದ್ಧಪಡಿಸಿದೆ. ಹೊಸ ಕೊರಿಯೊಗ್ರಫಿ ಯೋಜನೆ ಬಗ್ಗೆ ಚಿಂತನೆ ನಡೆಸಿದೆ. ಕೆಲವು ಆನ್‌ಲೈನ್ ಕಛೇರಿ ನೀಡಿದೆ. ಒಟಿಟಿಯಲ್ಲಿ ಆಸಕ್ತಿಯ ಸರಣಿಗಳನ್ನು ನೋಡಿದೆ. ಅದರ ಕಂಟೆಂಟ್ ಹಾಗೂ ಪರಿಕಲ್ಪನೆ ನನಗೆ ಮುಂದೆ ನಟನೆಗೆ ಸಹಾಯವಾಗಬಹುದು ಎಂಬುದು ನನ್ನ ಎಣಿಕೆ.

■